ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ದೂ.ಸಂ:22214350, ಫ್ಯಾಕ್ಸ್ :22211086, ಇ-ಮೇಲ್: cpi.edu.sgkar@mail.kar.nic.in

ಸಂಖ್ಯೆ:ನಿಪ್ರಾಶಿ : ಎಡಿಎಂ-2(4)ಜಲಾಮೃತ ಕಾರ್ಯಕ್ರಮ-31/2019-20 ದಿನಾಂಕ:28-06-2019

*ಪರಿಸರವನ್ನು ಬೆಳೆಸಿ, ನೀರನ್ನು ಸಂರಕ್ಷಿಸಿ ಜೀವಸಂಕುಲವನ್ನು ಉಳಿಸಿ*

*"ರಾಜ್ಯ ಜಲವರ್ಷ 2019"*

**ಸುತ್ತೋಲೆ**

**ವಿಷಯ:** ಶಾಲೆಗಳಲ್ಲಿ ಜಲಾಮೃತ ಕಾರ್ಯಕ್ರಮ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** ದಿನಾಂಕ:24-06-2019ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಜಲಾಮೃತ ಯೋಜನೆ ಪ್ರಗತಿ ಪರಿಶೀಲನಾ ಸಭೆ.

* * *

ಪರಿಸರದಲ್ಲಿರುವ ಪ್ರತಿಯೊಂದು ಜೀವಿಯು ಬದುಕುಳಿಯಲು ಗಾಳಿ, ಬೆಳಕಿನಷ್ಟೆ ನೀರು ಅತ್ಯಗತ್ಯ. ನೀರಿನ ಸೆಲೆಯಿಲ್ಲದಿದ್ದರೆ ಜೀವಿಗೆ ನೆಲೆಯಿಲ್ಲ ಎಂಬುದು ಅಷ್ಟೆ ಸತ್ಯ. ಜೀವಿಗಳ ಉಗಮ, ಅಸ್ತಿತ್ವ ಮತ್ತು ಬೆಳವಣಿಗೆಗೆ ಕಾರಣವಾಗಿರುವ ನೀರನ್ನು ಸಂರಕ್ಷಿಸಿ, ಸಮರ್ಪಕವಾಗಿ ಬಳಸುವುದು ಅಷ್ಟೆ ಮುಖ್ಯ. ಈ ನಿಟ್ಟಿನಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳ ವತಿಯಿಂದ 2019ನೇ ವರ್ಷವನ್ನು ರಾಜ್ಯ **"ಜಲವರ್ಷ"** ವನ್ನಾಗಿ ವರ್ಷದುದ್ದಕ್ಕೂ ಆಚರಿಸಲು ಯೋಜಿಸಲಾಗಿದೆ.

ಜಲದ ಮೂಲ ಅರಿಯುವುದು, ಜಲದ ಮೌಲ್ಯ ತಿಳಿಯುವುದು, ಜಲದ ಸದ್ಬಳಕೆ ಮಾಡುವುದು, ಜಲ ಮಾಲಿನ್ಯಗೊಳ್ಳದಂತೆ ಕ್ರಮಕೈಗೊಳ್ಳುವುದು, ಹೊಸ ಜಲ ಮೂಲಗಳ ನಿರ್ಮಾಣ ಮಾಡುವುದು ಹಾಗೂ ಜಲ ಸಂರಕ್ಷಣೆ ಮಾಡುವುದು ಇವುಗಳ ಕುರಿತು ಮಕ್ಕಳಲ್ಲಿ, ಪೋಷಕರಲ್ಲಿ, ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. ಜಲವರ್ಷವನ್ನು ಈ ಕೆಳಕಂಡ ನಾಲ್ಕು ರೀತಿಗಳಲ್ಲಿ ಆಚರಣೆ ಮಾಡಿ ಅರ್ಥಪೂರ್ಣಗೊಳಿಸಬೇಕಿದೆ.

1. ಜಲ ಸಾಕ್ಷರತೆ – ಜಲದ ಮೂಲ, ಜಲದ ಮೌಲ್ಯ, ಜಲದ ಸದ್ಬಳಕೆ, ಜಲ ಪುನರ್ಬಳಕೆ, ಜಲ ನೈರ್ಮಲ್ಯೀಕರಣ ಹಾಗೂ ಜಲ ಸಂರಕ್ಷಣೆ ಬಗ್ಗೆ ಮಕ್ಕಳಲ್ಲಿ, ಪೋಷಕರಲ್ಲಿ, ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.
2. ಜಲ ಮೂಲಗಳ ಪುನರುಜ್ಜೀವನ – ಜಲ ದೊರೆಯುವ ಮೂಲಗಳನ್ನು ಗುರುತಿಸುವುದು ಹಾಗೂ ನಾನಾ ಕಾರಣಗಳಿಂದ ಜಲ ಬತ್ತಿ ಹೋಗಿರುವ ಮೂಲಗಳಲ್ಲಿ ಪುನರುಜ್ಜೀವನ ಕಾಮಗಾರಿ ಕೈಗೊಂಡು ಜಲ ಮೂಲಗಳಲ್ಲಿ ಪುನಃ ನೀರು ಬರುವಂತೆ ಮಾಡುವುದು.
3. ಹೊಸ ಜಲ ಮೂಲಗಳ ನಿರ್ಮಾಣ – ಇರುವ ಜಲ ಮೂಲಗಳನ್ನು ಸಂರಕ್ಷಿಸುವುದರ ಜೊತೆಗೆ ಹೊಸದಾಗಿ ಜಲ ಸಂಗ್ರಹಣೆ ಮಾಡುವ ಕಾಮಗಾರಿಗಳನ್ನು (ಕೆರೆ-ಕಟ್ಟೆ ಚೆಕ್ ಡ್ಯಾಂಗಳ ನಿರ್ಮಾಣ) ಕೈಗೊಂಡು ನೀರು ಸಂಗ್ರಹಣೆಗೆ ಕ್ರಮವಹಿಸುವುದು.
4. ಹಸಿರೀಕರಣ – ವಿವಿಧ ಇಲಾಖೆಗಳು, ಖಾಸಗಿ ಸಂಸ್ಥೆಗಳು ಹಾಗೂ ಸಮುದಾಯದ ಸಹಭಾಗಿತ್ವದೊಂದಿಗೆ ಅರಣ್ಯಗಳನ್ನು ಬೆಳೆಸುವುದರ ಮೂಲಕ ಪರಿಸರ ಸಂರಕ್ಷಣೆ ಮಾಡುವುದು. ಗಿಡಗಳನ್ನು ನೆಡುವಂತಹ ಸ್ಥಳೀಯ ಅಭಿಯಾನ ಪ್ರಾರಂಭಿಸುವುದು, ಅರಣ್ಯಾಭಿವೃದ್ಧಿಯನ್ನು ಸಾಮೂಹಿಕ ಚಳುವಳಿಯನ್ನಾಗಿ ಮಾಡುವುದು ಆ ಮೂಲಕ ಜಲ ಒರತೆ ಸಾಮರ್ಥ್ಯ ಹೆಚ್ಚಿಸುವುದು. ಮಳೆಯ ನೀರು ಭೂಮಿಯಲ್ಲಿ ಇಂಗುವಂತೆ ಮಾಡುವುದರ ಮೂಲಕ ಅಂತರ್ ಜಲ ಪ್ರಮಾಣ ಹೆಚ್ಚಿಸುವುದು.

ಶಾಲಾ ಹಂತದಲ್ಲಿ ಜಲವರ್ಷವನ್ನು ಆಚರಣೆ ಮಾಡಿ, ಹಸಿರನ್ನು ಬೆಳೆಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲು ಸೂಚಿಸಿದೆ.

1. ನೆಲದ ಮೇಲೆ ಬೀಳುವ ಮಳೆಯ ನೀರನ್ನು ನೆಲವು ಹೀರಿ ಅಂತರ್ಜಲವನ್ನು ಹೆಚ್ಚಿಸುವುದಲ್ಲದೆ ಮಳೆಯಿಂದಾಗುವ ಭೂಸವಕಳಿಯನ್ನು ತಡೆಗಟ್ಟುವುದಲ್ಲದೆ ಭೂಮಿಯು ನೀರನ್ನು ಹೀರುವ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಗಿಡಮರಗಳು ಅತ್ಯಮೂಲ್ಯ ಪಾತ್ರವಹಿಸುತ್ತವೆ. ಹಸಿರು ಕರ್ನಾಟಕ ಕಾರ್ಯಕ್ರಮದಡಿ ಈಗಾಗಲೇ ಸುತ್ತೋಲೆಯಲ್ಲಿ ತಿಳಿಸಿರುವಂತೆ ಅರಣ್ಯ, ತೋಟಗಾರಿಕೆ ಹಾಗೂ ಕೃಷಿ ಇಲಾಖೆಗಳನ್ನು ಸಂಪರ್ಕಿಸಿ ಶಾಲಾ ಕಾಂಪೌಂಡ್, ಲಭ್ಯವಿರುವ ಶಾಲಾ ಭೂಮಿಯಲ್ಲಿ ಹಣ್ಣಿನ ಗಿಡಗಳು, ಔಷಧೀಯ ಸಸ್ಯಗಳು ಹಾಗೂ ಮರಗಳನ್ನು ಬೆಳೆಸಲು ಕ್ರಮಕೈಗೊಳ್ಳುವುದು.
2. ಶಾಲೆಗಳಲ್ಲಿ ಈಗಾಗಲೇ ಪ್ರತಿಭಾ ಕಾರಂಜಿ ಕಾರ್ಯಕ್ರಮದಡಿ ಮಕ್ಕಳಲ್ಲಿರುವ ಸೃಜನಾತ್ಮಕತೆಯನ್ನು ಹೆಚ್ಚಿಸುವಲ್ಲಿ ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಚರ್ಚಾಸ್ಪರ್ಧೆ, ಆಶುಭಾಷಣ, ವೇಷಭೂಷಣ, ಕಿರುನಾಟಕಗಳು, ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಈ ಕಾರ್ಯಕ್ರಮಗಳಲ್ಲಿ ನೀರಿನ ಮಹತ್ವ, ನೀರಿನ ಸದ್ಬಳಕೆ, ನೀರಿನ ನೈರ್ಮಲ್ಯೀಕರಣ, ಜಲ ಮತ್ತು ಜಲಮೂಲ ಸಂರಕ್ಷಣೆ, ಹಸಿರೀಕರಣ ವಿಷಯಗಳ ಅಳವಡಿಸಿಕೊಂಡು ಮಕ್ಕಳಲ್ಲಿ ಹಾಗೂ ಸಮುದಾಯದಲ್ಲಿ ಜಲಜಾಗೃತಿ ಮೂಡಿಸುವುದು.
3. ಶಾಲಾ ಕಟ್ಟಡಗಳಲ್ಲಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆಯಡಿ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸುವುದು.
4. ಈಗಾಗಲೇ ರಚಿಸಿದ ಜಲಾಮೃತ ಸಮಿತಿಗಳ ಸಹಕಾರದೊಂದಿಗೆ ಕಾರ್ಯಕ್ರಮ ಯಶಸ್ವಿಗೊಳಿಸುವುದು.
5. ಜಲ ಸಂರಕ್ಷಣೆ ಮತ್ತು ಜಲಾಮೃತ ಕಾರ್ಯಕ್ರಮದ ಬಗ್ಗೆ ಶಾಲಾ ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಇತರೆ ಸಭೆಗಳಲ್ಲಿ ಸಮುದಾಯದವರಿಗೆ ಅರಿವು ಮೂಡಿಸಬೇಕು.
6. ಈ ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ.ಗಳನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವುದು.
7. ಶಾಲೆಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ವಿಜ್ಞಾನ ಕ್ಲಬ್ ಮತ್ತು ಇಕೋ ಕ್ಲಬ್‌ಗಳು, ಶಾಲಾ ಸಂಸತ್ ನಡೆಸುವ ಕಾರ್ಯಕ್ರಮಗಳಲ್ಲಿ ಜಲ ಚಕ್ರ, ಜಲ ಪುನರ್ಬಳಕೆ, ಜಲಸಂರಕ್ಷಣೆ ಕುರಿತು ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.
8. ಪಠ್ಯ ವಿಷಯದಲ್ಲಿ ಅಳವಡಿಸಲಾಗಿರುವ ನೀರಿನ ವಿಷಯದ ಕುರಿತು ಚಟುವಟಿಕೆಗಳ ಮೂಲಕ ಬೋಧನೆ ಹಾಗೂ ಕಲಿಕಾ ಪ್ರಕ್ರಿಯೆಗಳನ್ನು ಕೈಗೊಳ್ಳುವುದು. (ಸ್ಥಳ ಸಂದರ್ಶನ, ಯೋಜಿತ ಕಾರ್ಯ ನಿರ್ವಹಣೆ, ಗುಂಪು ಅಧ್ಯಯನ ಮತ್ತು ಪ್ರಸ್ತುತಿ, ವಸ್ತುಪ್ರದರ್ಶನ ಇತ್ಯಾದಿ)
9. ಶಾಲೆಯ ಸುತ್ತಮುತ್ತಲ ಗ್ರಾಮ/ವಾರ್ಡ್/ಪಟ್ಟಣ ಪ್ರದೇಶಗಳಲ್ಲಿ ಜನ ಸಮುದಾಯದ ಅರಿವಿಗಾಗಿ ನೀರಿನ ಜಾಗೃತಿ ಜಾಥಾಗಳನ್ನು ಏರ್ಪಡಿಸುವುದು. ಜಾಥಾಗಳಲ್ಲಿ ನೀರಿನ ಮಿತಬಳಕೆ, ಶುದ್ಧ ನೀರಿನ ಬಳಕೆ, ನೀರು ದೊರೆಯುವ ಮತ್ತು ಬಳಸುವ ಸ್ಥಳಗಳನ್ನು (ಕೆರೆ, ಬಾವಿ, ಕೊಳವೆ ಬಾವಿ, ಕಿರು ನೀರು ಸರಬರಾಜು ನಲ್ಲಿಗಳು, ಸಂಪು ಇತ್ಯಾದಿ) ಸ್ವಚ್ಛವಾಗಿಟ್ಟುಕೊಳ್ಳುವುದು. ನೀರಿನ ಮೂಲಗಳು, ನೀರಿನ ಮಹತ್ವ ಇತ್ಯಾದಿ ವಿಷಯಗಳನ್ನೊಳಗೊಂಡ ಭಿತ್ತಿ ಪತ್ರಗಳು, ಪ್ರದರ್ಶನ ಫಲಕಗಳನ್ನು ಬಳಸುವುದು.
10. ಶಾಲೆಗಳಲ್ಲಿ ನೀರಿನ ಮಹತ್ವ ಸಾರುವ ಗೋಡೆ ಬರಹಗಳನ್ನು ಬರೆಸುವುದು, ಆಡಿಯೋ, ವಿಡಿಯೋಗಳನ್ನು ಮಕ್ಕಳಿಗೆ ಪ್ರದರ್ಶಿಸುವುದು.
11. ನೀರು ಮತ್ತು ಪರಿಸರತಜ್ಞರನ್ನು ಶಾಲೆಗೆ ಆಹ್ವಾನಿಸಿ ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸುವುದು.
12. ಶಾಲಾ ಜಮೀನಿನಲ್ಲಿ/ಶಾಲಾ ಕೈತೋಟದಲ್ಲಿ ಸುರಕ್ಷತೆ ಕ್ರಮವನ್ನನುಸರಿಸಿ ಇಂಗುಗುಂಡಿಗಳನ್ನು ನಿರ್ಮಾಣ ಮಾಡುವುದು.
13. ಮಳೆ ಹೆಚ್ಚಾಗಿ ಬೀಳುವ ಮಲೆನಾಡು ಪ್ರದೇಶಗಳಲ್ಲಿ ಇರುವ ಶಾಲೆಗಳಲ್ಲಿ ಮಳೆಯ ನೀರನ್ನು ಸಂಗ್ರಹಿಸಿ ಶಾಲೆಗೆ ಬಳಸಿಕೊಳ್ಳುವ ವ್ಯವಸ್ಥೆ ರೂಪಿಸಿಕೊಳ್ಳುವುದು.

14. ಪ್ರತಿ ವರ್ಷ ಶಾಲೆಯಲ್ಲಿ ಮಾರ್ಚ್ 22 ರಂದು ವಿಶ್ವ ನೀರಿನ ದಿನ, ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆ ಆಚರಿಸಲಾಗುತ್ತಿದ್ದು, ವಿಶೇಷವಾಗಿ ಈ ದಿನಗಳಲ್ಲಿ ನೀರಿನ ಕುರಿತು ಅರಿವು ಮೂಡಿಸುವುದು.

ವಾರ್ಷಿಕ ಕ್ರಿಯಾ ಯೋಜನೆ ತಯಾರಿಸುವಾಗ ಈಗಾಗಲೇ 2019-20ನೇ ಸಾಲಿಗೆ ರಚಿಸಿಕೊಂಡಿರುವ ಶೈಕ್ಷಣಿಕ ಮಾರ್ಗಸೂಚಿಯನ್ನು ಆಧರಿಸಿ ಜಲ ಸಂರಕ್ಷಣೆ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಹಾಗೂ ಈ ಕೆಳಕಂಡ ನಮೂನೆಯಲ್ಲಿ ಕ್ರಿಯಾ ಯೋಜನೆ ತಯಾರಿಸಿ ದಿನಾಂಕ:05-07-2019 ರೊಳಗೆ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಇಮೇಲ್ ವಿಳಾಸ: **primarydpi@gmail.com** ಗೆ ಸಲ್ಲಿಸಲು ತಿಳಿಸಿದೆ.

**ವಾರ್ಷಿಕ ಕ್ರಿಯಾ ಯೋಜನೆ ನಮೂನೆ**

| ಕ್ರ ಸಂ | ಕಾರ್ಯಕ್ರಮ ನಡೆಸಲಾಗುವ ಮಾಹೆ ಮತ್ತು ದಿನಾಂಕ | ನಡೆಸಲಾಗುವ ಚಟುವಟಿಕೆಗಳು | ಬಳಸಲಾಗುವ ಸಂಪನ್ಮೂಲ | ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳು | ಭಾಗವಹಿಸುವ ಸಹ ಇಲಾಖೆ | ಷರಾ |
|---|---|---|---|---|---|---|
| | | | | | | |

(ಎಂ.ಪಿ. ಮಾದೇಗೌಡ)
ನಿರ್ದೇಶಕರು, (ಪ್ರಾ.ಶಿ) (ಹೆ.ಪ್ರ)

**ಸೂಕ್ತ ಕ್ರಮಕ್ಕಾಗಿ :**

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ
3. ರಾಜ್ಯದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ ಇವರಿಗೆ ನಿಮ್ಮ ವ್ಯಾಪ್ತಿಯ ಶಾಲೆಗಳಿಗೆ ಸುತ್ತೋಲೆ ನೀಡಿ ಕಟ್ಟುನಿಟ್ಟಾಗಿ ಕಾರ್ಯಕ್ರಮ ಜಾರಿಗೊಳಿಸಲು ಕ್ರಮವಹಿಸುವುದು.
4. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು(ಅ.ದಾ), ಜಿಲ್ಲಾ ಪಂಚಾಯತ್ ಕಛೇರಿ, ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು(ಅ.ದಾ) ತಾಲ್ಲೂಕು ಪಂಚಾಯತ್ ಇವರಿಗೆ.
6. ರಾಜ್ಯದ ಎಲ್ಲಾ ಬಿ.ಆರ್.ಸಿ, ಬಿ.ಆರ್.ಪಿ ಮತ್ತು ಸಿ.ಆರ್.ಪಿ ಇವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ.

**ಪ್ರತಿಯನ್ನು ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಧಾರವಾಡ ಆಯುಕ್ತಾಲಯ.
5. ಕಛೇರಿ ಪ್ರತಿ.